ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಲೆಕ್ಕಾಧಿಕಾರಿರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-೫೬೦ ೦೦೨

ಸಂ:ಮುಲೆಅ/ಪಿಆರ್/ಕೆಆರ್ಐಡಿಎಲ್-01/2019-20 ದಿನಾಂಕ:09-05-2019

ಆದೇಶ

ವಿಷಯ: ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಕಾಮಗಾರಿಗಳಲ್ಲಿ 2018-19 ನೇ ಸಾಲಿನ ಎಸ್.ಆರ್. ದರಪಟ್ಟಿ ಪರಿಷ್ಕರಣೆ ಆದ ಕಾರಣ ಅಂದಾಜು ಪಟ್ಟಿಗಳಲ್ಲಿ ಜಿ.ಎಸ್.ಟಿ. ಮತ್ತು ಕೆ.ಆರ್.ಐ.ಡಿ.ಎಲ್. ಚಾರ್ಜಸ್‌ನ್ನು ಸೇರಿಸಿ, ವಹಿಸುವ ಬಗ್ಗೆ.

ಉಲ್ಲೇಖ: 1. ಅಧೀಕ್ಷಕರ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತ, ಬೆಂಗಳೂರು, ರವರ ಆದೇಶ ಸಂ:ಎಸ್ಇಬಿಸಿ/ಸಿಂ-3/2018-19ದರಪಟ್ಟಿ, ದಿನಾಂಕ:11-10-2018

2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ರವರ ಪತ್ರ ಸಂ:ಕೆಆರ್ಐಡಿಎಲ್/ಲೆಕ್ಕಪತ್ರ/ಜಿಎಸ್ಟಿ/2018-19, ದಿ:17-12-2018

3. ದಿನಾಂಕ:16-04-2019 ರಂದು ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿ ನಡೆದ ಸಭೆಯ ತೀರ್ಮಾನ.

4. ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ರವರ ಪತ್ರ ಸಂ:ಅಅ/ಕೆಆರ್ಐಡಿಎಲ್/ಬಿಬಿಎಂಪಿವಲಯ/ಜಿಎಸ್ಟಿ/2019-20/23, ದಿ:25-04-2019

*****

ಪ್ರಸ್ತಾವನೆ :

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು, ಉಲ್ಲೇಖಿತ (2) ರಂತೆ ಮನವಿ ಸಲ್ಲಿಸಿ, "ಸರ್ಕಾರವು ದಿನಾಂಕ:10-10-2018ರಿಂದ ಅನ್ವಯವಾಗುವಂತೆ ದರಪಟ್ಟಿಯನ್ನು ಪರಿಷ್ಕರಿಸಿ 2018-19ನೇ ಸಾಲಿನ ದರಪಟ್ಟಿ ಅಳವಡಿಸಲು ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ 2018-19ನೇ ಸಾಲಿನ ದರಪಟ್ಟಿ ಅನ್ವಯ ಅಂದಾಜುಪಟ್ಟಿ ತಯಾರಿಸುವಾಗ ಪ್ರತಿ ಐಟಂಗಳಲ್ಲಿ ಜಿ.ಎಸ್.ಟಿ. ದರ ಸೇರಿಸಿ ಅಂದಾಜುಪಟ್ಟಿ ತಯಾರಿಸಬೇಕಾಗಿರುತ್ತದೆ. ಸದರಿ ಅಂದಾಜುಪಟ್ಟಿಗೆ ಶೇ.4.5ರಂತೆ ಕೆ.ಆರ್.ಐ.ಡಿ.ಎಲ್. ಚಾರ್ಜಸ್ ಮತ್ತು ಇತರೆ ತೆರಿಗೆಗಳು ಸೇರಿಸಿ ಕೆಆರ್ಐಡಿಎಲ್ ಸಂಸ್ಥೆಗೆ ನಿರ್ವಹಿಸಲು ವಹಿಸಿದ ಕಾಮಗಾರಿಗಳಿಗೆ ಅಂದಾಜುಪಟ್ಟಿ ತಯಾರಿಸಲು ಸಂಬಂಧಪಟ್ಟ ಬಿಬಿಎಂಪಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ವಿನಂತಿಸಿರುತ್ತಾರೆ".

ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ವಿಶೇಷ ಆಯುಕ್ತರು (ಹಣಕಾಸು) ರವರ ಅಧ್ಯಕ್ಷತೆಯಲ್ಲಿ ದಿನಾಂಕ:15-04-2019 ರಂದು ಕೇಂದ್ರ ಕಛೇರಿಯ ಸಭಾಂಗಣ-2ರಲ್ಲಿ ಸಭೆಯನ್ನು ನಡೆಸಲಾಗಿದ್ದು, ಕೆ.ಆರ್.ಐ.ಡಿ.ಎಲ್. ಸಂಸ್ಥೆವತಿಯಿಂದ ಈ ವಿಷಯಕ್ಕೆ ಸಂಬಂಧಪಟ್ಟ ನುರಿತ ಹಣಕಾಸು ವಿಭಾಗದ ಮತ್ತು ತಾಂತ್ರಿಕ ಶಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದು, ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದ್ದು, ಅದರಂತೆ, ಉಲ್ಲೇಖ (4)ರಲ್ಲಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಕಾಮಗಾರಿಗಳಿಗೆ ಈ ಕೆಳಗೆ ವಿವರಿಸಿದಂತೆ ಚಾರ್ಜಸ್ ಮತ್ತು ಜಿ.ಎಸ್.ಟಿ.ಯನ್ನು ಅಂದಾಜುಪಟ್ಟಿಗಳಲ್ಲಿ ಅಳವಡಿಸಲು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರ ಈ ಕೆಳಕಂಡಂತಿದೆ :

ಪು.ತಿ.ನೋ.

Scanned by CamScanner

ಅಂದಾಜು ಮೊತ್ತ ರೂ.100.00ಗಳಿಗೆ ಉದಾಹರಿಸಲಾಗಿದೆ :

1.	Basic Cost As per SR (Excluding GST)	A--- Rs.85.86
2.	ADD: KRIDL Charges 4%	B--- Rs.03.43
3.	Total (A+B)	C--- Rs.89.29
4.	ADD: 12% GST on C	D--- Rs.10.71
5.	Estimated Cost (Job code cost) (C+D)	E--- Rs.100.00

ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ಜಾರಿಯಾದ ನಂತರ 2018–19ನೇ ಸಾಲಿನ ಬೆಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ, ಸಿವಿಲ್ ದರಪಟ್ಟಿಯನ್ನು ದಿನಾಂಕ:10–10–2018ರಿಂದ ಜಾರಿಗೆ ಬರುವಂತೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಅನುಮೋದನೆ ನೀಡಿದ್ದು, ಸದರಿ ಸಿವಿಲ್ ದರಗಳನ್ನು ಅಂತಿಮಗೊಳಿಸಲು ಸರ್ಕಾರದ ಪತ್ರ ಸಂ:ಪಿಡಬ್ಲ್ಯೂಡಿ 65 ಆರ್‌ಡಿಎಫ್ 2017, ದಿನಾಂಕ:04–09–2018 ರಂತೆ "ದರಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಳವಡಿಸಬೇಕಾದ ಎಲ್ಲಾ ಸಾಮಾಗ್ರಿಗಳ ದರಗಳನ್ನು ಜಿಎಸ್‌ಟಿ ಒಳಗೊಂಡಂತೆ ಪಡೆದು, ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸಿ, ಜಿಎಸ್‌ಟಿ ಹೊರತುಪಡಿಸಿದ ಬೇರ್ ದರಗಳನ್ನು ದರವಿಶ್ಲೇಷಣೆಯಲ್ಲಿ ಅಳವಡಿಸಿಕೊಂಡು ನಂತರ ಅಂದಾಜುಪಟ್ಟಿ ತಯಾರಿಸುವಾಗ ದರಪಟ್ಟಿಯ ದರಗಳೊಂದಿಗೆ ಸಿವಿಲ್ ಕಾಮಗಾರಿಗಳನ್ನು ಸೇವೆಗಳೆಂದು ಪರಿಗಣಿಸಿ ಶೇ.12ರಷ್ಟು ಜಿಎಸ್‌ಟಿ ಸೇರಿಸಲು ಹಾಗೂ ವೃತ್ತವಾರು ದರಪಟ್ಟಿಯನ್ನು ತಯಾರಿಸಲು" ನಿರ್ದೇಶಿಸಿರುವಂತೆ 2018–19ನೇ ಸಾಲಿನ ದರಪಟ್ಟಿಯನ್ನು ತಯಾರಿಸಲಾಗಿದ್ದು, ಜಿ.ಎಸ್.ಟಿ. ದರ ಶೇ.12ರಷ್ಟನ್ನು ಪ್ರತ್ಯೇಕವಾಗಿ (GST shall be paid to the tendered amount separately) ನೀಡಲು ಸೂಚಿಸಿ, ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಆದೇಶ ಸಂ:ಬಿಬಿಎಂಪಿ/ಮುಲೆಅ/ಪಿಆರ್/001/2019–20,
ದಿನಾಂಕ:09–05–2019, ಬೆಂಗಳೂರು

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸರ್ಕಾರದ ಆದೇಶದಂತೆ ಕೆಟಿಪಿಪಿ ಕಾಯ್ದೆಯ 4ಜಿ ಅಡಿಯಲ್ಲಿ ವಿನಾಯಿತಿ ಪಡೆದ ಕಾಮಗಾರಿಗಳನ್ನು ವಹಿಸುವ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರದಂತೆ ತಯಾರಿಸಿದ ಅಂದಾಜು ಪಟ್ಟಿಗೆ ಶೇ.3ರಷ್ಟು ಕೆ.ಆರ್.ಐ.ಡಿ.ಎಲ್. ಚಾರ್ಜಸ್, 1% ಲೇಬರ್‌ಸೆಸ್, 12% ಜಿ.ಎಸ್.ಟಿ.ಯನ್ನು ಸೇರಿಸಿ ಈ ಕೆಳಗೆ ವಿವರಿಸಿರುವ ಉದಾಹರಣೆಯಂತೆ ಜಾಬ್ ಸಂಖ್ಯೆ ಪಡೆದ ಮೊತ್ತದ ಮಿತಿಯಲ್ಲಿಯೇ ಅಂದಾಜುಪಟ್ಟಿ ತಯಾರಿಸಿ, ವಹಿಸುವುದು.

ಅಂದಾಜು ಮೊತ್ತ ರೂ.100.00ಗಳಿಗೆ ಉದಾಹರಿಸಲಾಗಿದೆ :

1.	Basic Cost As per SR (Excluding GST)	A--- Rs.85.86
2.	ADD: KRIDL Charges 4%	B--- Rs.03.43
3.	Total (A+B)	C--- Rs.89.29
4.	ADD: 12% GST on C	D--- Rs.10.71
5.	Estimated Cost (Job code cost) (C+D)	E--- Rs.100.00

ಪು.ತಿ.ನೋ.

Scanned by CamScanner

ಮುಂದುವರೆದು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಹೊರಡಿಸಿರುವ ಅಧಿಸೂಚನೆ ಸಂ:12/2017–ಕೇಂದ್ರ ತೆರಿಗೆ (ದರ) ದಿನಾಂಕ:28–07–2017 ಮತ್ತು ತಿದ್ದುಪಡಿ ಅಧಿಸೂಚನೆ ಸಂ:02/2018 – ಕೇಂದ್ರ ತೆರಿಗೆ (ದರ) ದಿನಾಂಕ:25–01–2018ರಂತೆ ವಹಿಸುವ ಕಾಮಗಾರಿಗಳಲ್ಲಿ ಜಿ.ಎಸ್.ಟಿ. ದರವು Nil ಇರುವುದರಿಂದ ಅಂದಾಜು ಪಟ್ಟಿಗೆ ಶೇ.3ರಷ್ಟು ಕೆ.ಆರ್.ಐ.ಡಿ.ಎಲ್. ಚಾರ್ಜಸ್, 1% ಲೇಬರ್‌ಸೆಸ್ ಅನ್ನು ಮಾತ್ರ ಸೇರಿಸಿ ಮೇಲಿನಂತೆ ವಹಿಸುವುದು.

> **Entry 3A Chapter 99 :** "Composite supply of goods and services in which the value of supply of goods constitutes not more than 25 per cent. of the value of the said composite supply provided to the Central Government, State Government or Union territory or local authority or a Governmental authority or a Government Entity by way of any activity in relation to any function entrusted to a Panchayat under article 243G of the Constitution or in relation to any function entrusted to a Municipality under article 243W of the Constitution". Tax rate Nil

ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ರವರ ಪತ್ರ ಸಂ:ಕೆಆರ್‌ಐಡಿಎಲ್/ಲೆಕ್ಕಪತ್ರ/ಜಿಎಸ್‌ಟಿ/2018–19, ದಿ:17–12–2018 ರಂತೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡು ವಹಿಸಿರುವ ಕಾಮಗಾರಿಗಳ ಕಾರ್ಯಾದೇಶವನ್ನು ಶೇ.4 ರಷ್ಟು ಕೆ.ಆರ್.ಐ.ಡಿ.ಎಲ್. ಚಾರ್ಜಸ್, 12% ಜಿ.ಎಸ್.ಟಿ.ಗೆ ಮೇಲಿನ ಉದಾಹರಣೆಯಂತೆ ಮಿತಿಗೊಳಿಸಿ, ಸ್ಥಿರೀಕರಿಸಿ ಆದೇಶಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು :

1. ಸದರಿ ವಿಷಯವನ್ನು ಪೂಜ್ಯ ಮಹಾಪೌರರ ಗಮನಕ್ಕೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿದೆ.
2. ಸದರಿ ವಿಷಯವನ್ನು ಉಪ ಮಹಾಪೌರರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಎಲ್ಲಾ ಸ್ಥಾಯಿ ಸಮಿತಿಗಳ ಮಾನ್ಯ ಅಧ್ಯಕ್ಷರು/ಸದಸ್ಯರುಗಳ ಗಮನಕ್ಕೆ ತರಲು ಕೌನ್ಸಿಲ್ ಕಾರ್ಯದರ್ಶಿರವರಿಗೆ ಸೂಚಿಸಿದೆ.
4. ವಿಶೇಷ ಆಯುಕ್ತರು (ಹಣಕಾಸು/ಯೋಜನೆ/ಆಸ್ತಿಗಳು/ಕಂದಾಯ/ಶಿಕ್ಷಣ/ಕಲ್ಯಾಣ)ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಆರ್ಥಿಕ ಅಧಿಕಾರಿ (ಜೆ.ಎನ್.ಎನ್.ಯು.ಆರ್.ಎಂ)ರವರಿಗೆ ಕ್ರಮಕ್ಕಾಗಿ.
6. ಜಂಟಿ/ಅಪರ ಆಯುಕ್ತರು (ಹಣಕಾಸು/ಆರೋಗ್ಯ/ಘ.ತ್ಯಾ.ನಿ)ರವರ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರ ಸೂಕ್ತ ಕ್ರಮಕ್ಕಾಗಿ.
8. ಪ್ರಧಾನ ಅಭಿಯಂತರರು, ಬಿಬಿಎಂಪಿ, ಇವರಿಗೆ ಸೂಕ್ತ ಕ್ರಮಕ್ಕಾಗಿ.
9. ಉಪ ಆಯುಕ್ತರು (ಆಡಳಿತ/ಕಂದಾಯ/ಕಲ್ಯಾಣ/ಆಸ್ತಿಗಳು/ತೆರಿಗೆಗಳು) ರವರ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಆಯುಕ್ತರು (ಜಾಹೀರಾತು)ರವರ ಸೂಕ್ತ ಕ್ರಮಕ್ಕಾಗಿ.

ಪು.ತಿ.ನೋ.

Scanned by CamScanner

11. ಎಲ್ಲಾ ವಲಯಗಳ ಮುಖ್ಯ ಅಭಿಯಂತರರವರಿಗೆ ಸೂಕ್ತ ಕ್ರಮಕ್ಕಾಗಿ.
12. ಮುಖ್ಯ ಅಭಿಯಂತರರು (ಕೆರೆಗಳು/ಯೋಜನೆ/ಮೂಲಭೂತ ಸೌಕರ್ಯ/ಬೃಹತ್ ನೀರುಗಾಲುವೆ/ಟಿ.ವಿ.ಸಿ.ಸಿ/ಘ.ತ್ಯಾ.ನಿ) ಸೂಕ್ತ ಕ್ರಮಕ್ಕಾಗಿ.
13. ಮುಖ್ಯ ಆರೋಗ್ಯಾಧಿಕಾರಿ (ಸಾಮಾನ್ಯ/ಕ್ಲಿನಿಕಲ್)ರವರ ಸೂಕ್ತ ಕ್ರಮಕ್ಕಾಗಿ.
14. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
15. ಉಪನಿಯಂತ್ರಕರು (ಹಣಕಾಸು–ಕೇಂದ್ರ)ರವರ ಸೂಕ್ತ ಕ್ರಮಕ್ಕಾಗಿ.
16. ಎಲ್ಲಾ ವಲಯಗಳ ಸಹಾಯಕ /ಉಪ ನಿಯಂತ್ರಕರು (ಹಣಕಾಸು)ರವರ ಸೂಕ್ತ ಕ್ರಮಕ್ಕಾಗಿ.
17. ಸಹಾಯಕ ನಿಯಂತ್ರಕರು (ಹಣಕಾಸು–ಕೇಂದ್ರ)ರವರ ಸೂಕ್ತ ಕ್ರಮಕ್ಕಾಗಿ.
18. ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರ (ವಿಭಾಗ/ಯೋಜನೆ/ವಿದ್ಯುತ್) ಸೂಕ್ತ ಕ್ರಮಕ್ಕಾಗಿ.
19. ಉಪನಿರ್ದೇಶಕರು (ತೋಟಗಾರಿಕೆ/ಪಶುಪಾಲನೆ)ರವರ ಸೂಕ್ತ ಕ್ರಮಕ್ಕಾಗಿ.
20. ಎಲ್ಲಾ ವಲಯಗಳ ಸಹಾಯಕ / ಉಪ ನಿರ್ದೇಶಕರು (ನಗರ ಯೋಜನೆ)ರವರ ಸೂಕ್ತ ಕ್ರಮಕ್ಕಾಗಿ.
21. ಸಹಾಯಕ ಆಯುಕ್ತರು (ಶಿಕ್ಷಣ) / ವಿದ್ಯಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
22. ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಸದರಿ ಸುತ್ತೋಲೆಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸುವುದು.
23. ಕಚೇರಿ ಪ್ರತಿ

Scanned by CamScanner